ಬೈಲಹೊಂಗಲ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ ಕಾರ್ಯಗಳ ಅನುಷ್ಠಾನ

652 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಭಾರಿ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ 1) ಸಂಗೊಳ್ಳಿ 2) ದೇವಲಾಪುರ 3) ವಕ್ಕುಂದ 4) ಅನಿಗೋಳ ಹಾಗೂ ಸವದತ್ತಿ ತಾಲ್ಲೂಕಿನ 5) ಮೊಟೊಳ್ಳಿ 6) ಎಣಗಿ ಗ್ರಾಮಗಳ ಏತ ನೀರಾವರಿ ಯೋಜನೆಗಳನ್ನು ಅಂದಾಜು ಸಮಿತಿಯವರು ಶಿಫಾರಸ್ಸು ಮಾಡಿದ ಪ್ರಕಾರ ಕ್ರಮ ಕೈಕೊಳ್ಳುವುದಾಗಿ ಕಳೆದ ಅಧಿವೇಶನದಲ್ಲಿ ಮಾನ್ಯ ಸಣ್ಣ ನೀರಾವರಿ ಸಚಿವರು ನೀಡಿದ ಆಶ್ವಾಸನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದವರು ಕೈಕೊಂಡ ಕ್ರಮವೇನು?

ಆ) ಈ ಏತ ನೀರಾವರಿ ಯೋಜನೆಗಳ ಅಂದಾಜು ವೆಚ್ಚ ತಯಾರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಪ್ರತಿಯೊಂದೂ ಏತ ನೀರಾವರಿ ಯೋಜನೆಗೆ ತಗಲುವ ವೆಚ್ಚವೆಷ್ಟು?

ಈ) ಪ್ರತಿಯೊಂದು ಏತ ನೀರಾವರಿ ಯೋಜನೆಯಿಂದ ಎಷ್ಟೆಷ್ಟು ಎಕರೆ ನೀರಾವರಿ ಆಗುವುದು?

ಉ) ಅಂದಾಜು ಸಮಿತಿಯವರು 3 ತಿಂಗಳೊಳಗಾಗಿ ಈ ಕೆಲಸಗಳನ್ನು ಪ್ರಾರಂಭಿಸಬೇಕೆಂದು ಮಾಡಿರುವ ಶಿಫಾರಸ್ಸಿನ ಪ್ರಕಾರ ಇನ್ನೂ ಕೆಲಸಗಳನ್ನು ಪ್ರಾರಂಭಿಸದೇ ಇರುವ ಸಂಗತಿ ನಿಜವೇ?

ಊ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳೊಳಗಾಗಿ ಈ ಏತ ನೀರಾವರಿ ಯೋಜನೆಯ ಕೆಲಸಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಸಚಿವರು) :

ಅ) ಈ ದಿಕ್ಕಿನಲ್ಲಿ ಈಗಾಗಲೇ 5 ಅಗಮೆಂಟೇಶನ ಹೊಸ ಏತ ನೀರಾವರಿ ಯೋಜನೆಗಳ ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿರುತ್ತದೆ.

ಆ) ಹೌದು.

ಇ) ವಿವರಗಳು ಈ ರೀತಿ ಇರುತ್ತವೆ :

ಕ್ರ. ಸಂ.	ಏತ ನೀರಾವರಿ ಯೋಜನೆ	ನೀರಾವರಿ ಆಗಲಿರುವ ಕ್ಷೇತ್ರ (ಎಕರೆ)	ರೇಖಾ ಅಂದಾಜು ವೆಚ್ಚ (92-93)ರ ದರದಲ್ಲಿ (ರೂ.ಗಳಲ್ಲಿ)
1)	ಅಗಮೆಂಟೇಶನ ಆಫ್ ಎಣಗಿ-ಹಿಟ್ಟಣಗಿ ಏತ ನೀರಾವರಿ ಯೋಜನೆ (ಎಣಗಿಯಲ್ಲಿ)	1150	60.00 ಲಕ್ಷ
2)	ಅಗಮೆಂಟೇಶನ ಆಫ್ ಮಲ್ಲೂರು-ಮೊಟೊಳ್ಳಿ ಏತ ನೀರಾವರಿ ಯೋಜನೆ (ಮಾಟೊಳ್ಳಿಯಲ್ಲಿ)	1060	58.50 ಲಕ್ಷ

3)	ಅಗಮೆಂಟೇಶನ ಅಫ್ ಆರ್.ಬಿ.ಸಿಯ ಜಾಲಿ ಕೊಪ್ಪ ಮತ್ತು ಎಲಬಿಸಿಯ ಹೊಸೂರು-ಎಕ್ಕುಂದದಲ್ಲಿ ಏತ ನೀರಾವರಿ ಯೋಜನೆ (ವಕ್ಕುಂದದಲ್ಲಿ)	1583	98.50 ಲಕ್ಷ
4)	ದೇವಲಾಪುರ ಏತ ನೀರಾವರಿ ಯೋಜನೆ (ಹೊಸದು)	3280	332.00 ಲಕ್ಷ
5)	ಅಗ್‌ಮೆಂಟೇಶನ್ ಅಫ್ ಆರ್ ಬಿ ಸಿ ಯ ಕೆಂಗಾನೂರು ಏತ ನೀರಾವರಿ ಯೋಜನೆ (ಸಂಗೊಳ್ಳಿಯಲ್ಲಿ)	1311	83.33 ಲಕ್ಷ

ಈ) ವಿವರಗಳನ್ನು ಮೇಲೆ ತಿಳಿಸಿದ ಪಟ್ಟಿಯಲ್ಲಿ ಕೊಡಲಾಗಿದೆ.

ಉ) ಹೌದು

ಊ) ಅಂದಾಜು ಪತ್ರಿಕೆಗಳು ಪರಿಶೀಲನೆಯಲ್ಲಿದ್ದು, ಅವುಗಳಿಗೆ ಮಂಜೂರಾತಿ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಬೈಲಹೊಂಗಲ ತಾಲ್ಲೂಕಿನ ಕಾದರೊಳ್ಳಿ ಗ್ರಾಮದ ಹತ್ತಿರ ಹಾಗೂ ಹೊಳಿನಾಗಲಾಪುರ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ

650 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಾದರೊಳ್ಳಿ ಗ್ರಾಮದ ಹತ್ತಿರ ಹಾಗೂ ಹೊಳಿನಾಗಲಾಪುರ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆಗಳನ್ನು (ಬ್ರಿಡ್ಜ್ ಕಮ್ ಬಾಂದಾರ) ಕೈಗೊಳ್ಳಲು ಸಾರ್ವಜನಿಕರಿಂದ ಸರ್ಕಾರಕ್ಕೆ ಮನವಿಗಳು ಏನಾದರೂ ಬಂದಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಅಥವಾ ಬ್ರಿಡ್ಜ್ ಕಮ್ ಬಾಂದಾರ ಕೈಗೊಳ್ಳಲು ಸರ್ಕಾರದವರು ಕ್ರಮ ಕೈಗೊಂಡಿರುವರೇ?

ಇ) ಹಾಗಿಲ್ಲದಿದ್ದಲ್ಲಿ ಕೂಡಲೇ ಇವುಗಳ ಅಂದಾಜು ವೆಚ್ಚವನ್ನು ತಯಾರಿಸಲು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಆದೇಶ ನೀಡಲಾಗುವುದೇ?

(ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕಾದರೊಳ್ಳಿ ಹತ್ತಿರ ಮಲಪ್ರಭಾ ನದಿಗೆ ಬ್ಯಾರೇಜು ಕಟ್ಟುವ ಬಗ್ಗೆ ಮನವಿಗಳು ಬಂದಿವೆ. ಆದರೆ ಹೊಳಿನಾಗಲಾಪುರ ಹತ್ತಿರ ಏತ ನೀರಾವರಿ ಯೋಜನೆ ಬಗ್ಗೆ ಮನವಿಗಳು ಬಂದಿರುವುದಿಲ್ಲ.

ಆ) ಈ ಯೋಜನೆಗಳು ಯಾವುದೇ ಅನುಮೋದಿತ ಆಯವ್ಯಯದ ಕಾರ್ಯಕ್ರಮದಲ್ಲಿ ಇರುವುದಿಲ್ಲ.

ಇ) ಯೋಜನೆಗಳನ್ನು ಆಯವ್ಯಯದಲ್ಲಿ ಸೇರಿದ ನಂತರ ಕ್ರಮ ಕೈಗೊಳ್ಳಲಾಗುವುದು.